**ಸಿ.ಸಿಃ85/2023**
**DW-1**

**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಚನ್ನಗಿರಿ.</u>**

**ಸಿ.ಸಿಃ85/2023 DW-1**

| | |
|---|---|
| ಸಾಕ್ಷಿದಾರರ ಹೆಸರು | ಅವಿನಾಶ್ |
| ತಂದೆಯ ಹೆಸರು | ಮಂಜಪ್ಪ |
| ವಯಸ್ಸು | 33 ವರ್ಷ |
| ಉದ್ಯೋಗ | ಚಾಲಕ |
| ವಾಸಸ್ಥಳ | ಚನ್ನಗಿರಿ |
| ದಿನಾಂಕ | 03.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು |

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರಿ ವೈ ಎಂ ಆರ್ ವಕೀಲರಿಂದಃ**

ಪಿರ್ಯಾದುದಾರರು ನನ್ನ ಗೆಳೆಯನ ಹೆಂಡತಿ ಇರುತ್ತಾರೆ. ನನ್ನ ಗೆಳೆಯ ಸಹ ಚಾಲಕ ಇದ್ದು ಹಾಗಾಗಿ ನಾವು 10-11 ವರ್ಷಗಳಿಂದ ಪರಿಚಯ ಇರುತ್ತೇವೆ. ನನ್ನ ಮತ್ತು ಪಿರ್ಯಾದುದಾರರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ. ನಾನು ಪಿರ್ಯಾದುದಾರರ ಕಡೆಯಿಂದ ದೂರಿನಲ್ಲಿ ಹೇಳಿರುವಂತೆ ಯಾವುದೇ ಹಣವನ್ನು ಪಡೆದಿಲ್ಲ. ನಾನು ಪಿರ್ಯಾದುದಾರರನ್ನು ಯಾವತ್ತು ಭೇಟಿಯಾಗಿ ಹಣ ಬೇಕು ಎಂದು ಕೇಳಿಲ್ಲ. ಪ್ರಶ್ನಿತ ಚೆಕ್ ನನ್ನ ಖಾತೆಗೆ ಸಂಬಂಧಿಸಿದ್ದು ಇರುತ್ತದೆ. ಆದರೆ ಅದರಲ್ಲಿ ಇರುವ ಸಹಿ ನನ್ನದಲ್ಲ. ಅದೇ ರೀತಿ ಪ್ರಶ್ನಿತ ಚೆಕ್ಕಿನಲ್ಲಿ ಇರುವ ಬರವಣಿಗೆ ಸಹ ನನ್ನದು ಅಲ್ಲ. ನಾನು ಸದರಿ ಚೆಕ್ಕನ್ನು ಪಿರ್ಯಾದುದಾರರಿಗೆ ಹಣದ ಮರುಪಾವತಿಗಾಗಿ ಕೊಟ್ಟಿಲ್ಲ ನಾನು ಮತ್ತು ಪಿರ್ಯಾದಿಯ ಗಂಡ ಜೊತೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ನನಗೆ ಸಮಯದ ಅಭಾವ ಇರುವ ಕಾರಣ ಪ್ರಶ್ನಿತ ಚೆಕ್ಕನ್ನು ನನ್ನ ಗೆಳೆಯನ ಕೈಯಲ್ಲಿ ಕೊಟ್ಟಿದ್ದೆ. ಸದರಿ ಚೆಕ್ಕನ್ನು 6-7 ವರ್ಷಗಳ ಹಿಂದೆ ನನ್ನ ಗೆಳೆಯನ ಕೈಯಲ್ಲಿ ಕೊಟ್ಟಿದ್ದೆ. ದೂರುದಾರರು ಅವರ ಗಂಡನ ನಡುವೆ ವಿವಾಹ ವಿಚ್ಛೇದನ ಆಗಿದ್ದು ಅವರಿಬ್ಬರ ನಡುವೆ ವೈಮನಸ್ಸು ಉಂಟಾಗಿ ನನ್ನ ಚೆಕ್ ಪಿರ್ಯಾದುದಾರರ ಮನೆಯಲ್ಲಿಯೇ ಉಳಿದಿರುತ್ತದೆ. ನನ್ನ ಗೆಳೆಯ ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈಗಲೂ ಸಹ ಅವರು ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ನೋಟೀಸು ಕೊಟ್ಟ ನಂತರ ನಾನು ಸದರಿ ನೋಟಿಸಿಗೆ ಮರುಉತ್ತರ ನೀಡಿ ಚೆಕ್ಕಿನಲ್ಲಿ ಇರುವ ಸಹಿ ನನ್ನದಲ್ಲ ಎಂದು ಹೇಳಿದ್ದೆ. ಸದರಿ ನೋಟಿಸಿಗೆ ಉತ್ತರ ಕೊಟ್ಟ ಬಗ್ಗೆ ಅದರ ಪ್ರತಿ ನನ್ನ ಬಳಿ ಇಲ್ಲ. ನಾನು ನನ್ನ ಖಾತೆಯಿರುವ ಸುಕೋ ಬ್ಯಾಂಕಿನ ಸ್ಟೇಟ್ ಮೆಂಟನ್ನು ಹಾಜರಿಸಿದ್ದೇನೆ. ಸದರಿ ಸ್ಟೇಟ್ ಮೆಂಟನ್ನು ನಿಡಿ.1 ಎಂದು ಗುರುತಿಸಲಾಯಿತು. ನನ್ನ ಮಾದರಿ ಸಹಿ ಇರುವ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲೆಯನ್ನು ನಿಡಿ.2 ಎಂದು ಗುರುತಿಸಲಾಯಿತು. ನಿಡಿ.2 ರಲ್ಲಿರುವ

**ಸಿ.ಸಿಃ85/2023**
**DW-1**

ಸಹಿಯನ್ನು 2(ಎ) ಎಂದು ಗುರುತಿಸಲಾಯಿತು. ಪ್ಯಾನ್ ಕಾರ್ಡನ್ನು ನಿಡಿ.3 ಎಂದು ಗುರುತಿಸಲಾಯಿತು. ಪಿರ್ಯಾದುದಾರರು ಟೈಲರಿಂಗ್ ಕೆಲಸ ಮಾಡುತ್ತಾರೆ. ನಾನು ಪಿರ್ಯಾದುದಾರರ ಕಡೆಯಿಂದ ಹಣ ಪಡೆದು ಅದರ ಮರುಪಾವತಿಗಾಗಿ ಪ್ರಶ್ನಿತ ಚೆಕ್ಕನ್ನು ಕೊಟ್ಟಿಲ್ಲ. ನಾನು ಪ್ರಶ್ನಿತ ಚೆಕ್ಕಿನಲ್ಲಿ ಹೇಳಿರುವ ಹಣವನ್ನು ಪಿರ್ಯಾದುದಾರರಿಗೆ ಮರುಪಾವತಿ ಮಾಡಲು ಬಾಧ್ಯಸ್ಥ. ಇರುವುದಿಲ್ಲ. ಪಿರ್ಯಾದುದಾರರು ನನ್ನ ಚೆಕ್ಕನ್ನು ದುರುಪಯೋಗ ಮಾಡಿಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ. ಆದ್ದರಿಂದ ದೂರನ್ನು ವಜಾ ಮಾಡಿ ನನ್ನನ್ನು ಬಿಡುಗಡೆ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ಪಿರ್ಯಾದು ಪರ ವಕೀಲರಿಂದಃ

( ಪಿರ್ಯಾದು ಪರ ವಕೀಲರ ವಿನಂತಿಯ ಮೇರೆಗೆ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**